ನೀಡಿ' ಎಂದು ವಿನಂತಿಸಿದ. ರಾಜ ಗಲಿಬಿಲಿಗೊಂಡರೂ, ಅವನಿಗೆ ಹತ್ತಿರ ಬರಲು ಅಪ್ಪಣೆ ನೀಡಿದ. ಮಣಿಕಂಠ ರಾಜನ ಬಳಿ ತೆರಳಿ 'ಮಹಾಪ್ರಭು, ನಾನು ಕದ್ದದ್ದು ಇನ್ನೂರು ನಾಣ್ಯ ಮಾತ್ರ. ಅದರಿಂದ ಇಂದು ನಮ್ಮ ಹಳ್ಳಿಯ ಶಾಲೆಯ ದುರಸ್ತಿ ಶುರುಮಾಡಿಸಿದ್ದೇನೆ. ಉಳಿದ ನಾಣ್ಯಗಳನ್ನು ಕದ್ದಿರುವುದು ಮಂತ್ರಿಗಳು. ಅವರ ಮನೆಗೆ ಈಗಲೇ ಸೈನಿಕರನ್ನು ಕಳಿಸಿ, ಪತ್ತೆ ಹಚ್ಚಿ. ನಾನು ಹೇಳಿದ್ದು ಸುಳ್ಳಾದರೆ, ನನಗೆ ಯಾವುದೇ ಶಿಕ್ಷೆ ನೀಡಿ. ನಾನೇನೂ ಓಡಿಹೋಗುವುದಿಲ್ಲ' ಎಂದ.

ರಾಜನಿಗೆ ನಂಬಲಾಗಲಿಲ್ಲ. ಆದರೂ, ಸೇನಾಪತಿಯನ್ನು ಕರೆದು, ಅವನ ಕಿವಿಯಲ್ಲಿ ಮಣಿಕಂಠನ ಮಾತನ್ನೇ ಹೇಳಿದ. ಸೇನಾಪತಿ ಹೊರಟು ಹೋದ. ಆ ವೇಳೆಗೆ ರಾಜಭವನದ ಹೊರಗೆ ಗದ್ದಲ ಕೇಳಿ, ರಾಜ ಮಹಾದ್ವಾರದ ಬಳಿ ತೆರಳಿದ. ಸಾವಿರಾರು ಬಡ ಜನ 'ಮಹಾರಾಜರಿಗೆ ಜಯವಾಗಲಿ. ಮಣಿಕಂಠ ಯಾವುದೇ ಅಪರಾಧ ಮಾಡಿಲ್ಲ. ಅವನಿಗೆ ಶಿಕ್ಷೆ ನೀಡಬೇಡಿ. ನೀಡುವುದೇ ಆದರೆ, ನಮಗೆ ನೀಡಿ' ಎಂದು ಕೂಗುತ್ತ, ಅರಮನೆಯನ್ನು ಸುತ್ತುವರಿದಿದ್ದನ್ನು ಕಂಡ. ತನ್ನ ಗುಪ್ತಚಾರರನ್ನು ಕರೆದು 'ಇದೆಲ್ಲ ಏನು ನಡೀತಿದೆ?' ಎಂದು ಪ್ರಶ್ನಿಸಿದ. ಆತ ತಲೆ ತಗ್ಗಿಸಿ, ಮಣಿಕಂಠನ ಇತಿಹಾಸ ಅರುಹಿದ. 'ಇದನ್ನು ತಮಗೆ ಹೇಳಿದರೆ, ನನ್ನನ್ನು ಕೊಂದುಬಿಡುವುದಾಗಿ ಮಹಾಮಂತ್ರಿಗಳು ಹೆದರಿಸಿದ್ದರು. ಹಾಗಾಗಿ, ನಾನು ಇದನ್ನು ತಮ್ಮ ಗಮನಕ್ಕೆ ತರದೇ ತಪ್ಪು ಮಾಡಿದ್ದೇನೆ' ಎಂದು ರಾಜನ ಕಾಲಿಗೆ ಬಿದ್ದ.

ಈಗ ರಾಜನಿಗೆ ಎಲ್ಲವೂ ಅರ್ಥವಾಗಿತ್ತು. ಅದೇ ಸಮಯಕ್ಕೆ ಚಿನ್ನ, ಬೆಳ್ಳಿಯ ನಾಣ್ಯದ ಮೂಟೆಗಳನ್ನು ಹೊತ್ತ ಸೈನಿಕರು ರಾಜನೆದುರು ಹಾಜರಾದರು. 'ಮಂತ್ರಿಗಳ ಮನೆಯ ಮೂಲೆ, ಮೂಲೆ ಶೋಧನೆ ನಡೀತಿದೆ ಮಹಾಪ್ರಭು. ಈವರೆಗೆ ಸಿಕ್ಕದ್ದು ಇಷ್ಟು' ಎನ್ನುತ್ತಾ ಸೇನಾಪತಿ ಆ ಮೂಟೆಗಳನ್ನು ಬೊಕ್ಕಸಕ್ಕೆ ಸಾಗಿಸಿದ. ಕಲಾನಿಧಿಯನ್ನು ಸೆರೆಮನೆಗೆ ತಳ್ಳಿದ ರಾಜ, ಮಣಿಕಂಠನನ್ನು ಕರೆದು ತಬ್ಬಿಕೊಂಡ. 'ನೀನೇ ಇಂದಿನಿಂದ ಈ ದೇಶದ ಮಂತ್ರಿ' ಎಂದು ಘೋಷಿಸಿದ.

■ **ನಾಗೇಶ ಜಿ. ವೈದ್ಯ**

# ಶಿಶುಪ್ರಾಸಗಳು



### ಬಣ್ಣ

ಕಾಮನ ಬಿಲ್ಲಿಗೆ
ಏಳೇ ಬಣ್ಣ
ಎಲ್ಲವೂ ಅದರಲೆ
ಕಾಣುವುದಣ್ಣ
ಆದರೂ ಕಾಣದು
ಅದರಲಿ ಸುಣ್ಣ
ಕಾರಣ,
ಬೆಳಕಲಿ ಇರುವುದು
ಆ ಏಳೇ ಬಣ್ಣ!

### ಸೀತಾಫಲ

ಸೀತೆಯ ಫಲವು
ಸೀತಾಫಲವು
ತಿನ್ನಲು ಬಾಯಿಗೆ
ಬೀಜವೆ ಅಡ್ಡವು
ಬಿಡಿಸಿ ತಿನ್ನಲು
ಸಮಯವು ಸಾಲದು
ಹಾಗೇ ತಿನ್ನಲು
ರುಚಿಗೆ ನಿಲುಕದು.

■ **ಪ.ನಾ. ಹಳ್ಳಿ ಹರೀಶ್ ಕುಮಾರ್**



ಚಿತ್ರಗಳು: ಶಿಲ್ಪಾ ಕಬ್ಬಿಣಕಂತಿ

# ನಮ್ಮ ಹೆಮ್ಮೆಯ ಕನಕ



ಬಲದಿಂದ ಎಡಕ್ಕೂ
ಎಡದಿಂದ ಬಲಕ್ಕೂ
ಓದಿದರೂ ಕನಕ ಕನಕ
ನಮ್ಮ ಹೆಮ್ಮೆಯ ಕನಕ

ಬಲದಿಂದ ಎಡಕ್ಕೂ
ಎಡದಿಂದ ಬಲಕ್ಕೂ
ಓದಿದರೂ ನಮನ ನಮನ
'ನಾನು' ಹೋದರೆ
ಸ್ವರ್ಗಕ್ಕೆ ಹೋದೇನು
ಎಂದ ಕನಕದಾಸರಿಗೆ
ನಮ್ಮ ನಮನ

ಬಲದಿಂದ ಎಡಕ್ಕೂ
ಎಡದಿಂದ ಬಲಕ್ಕೂ
ಓದಿದರೂ ವಿಕಟಕವಿ
ಸತ್ಯವಂತರ ಸಂಗವಿರಲು
ತೀರ್ಥ ಯಾತಕೆ ಎಂದ
ಕನಕರ ನುಡಿಯೆ ಸವಿಸವಿ

ಬಲದಿಂದ ಎಡಕ್ಕೂ
ಎಡದಿಂದ ಬಲಕ್ಕೂ
ಓದಿದರೂ ಪಂಪ ಪಂಪ
ಕನಕದಾಸರೆಂದರು
ಕುಲಕಲವೆಂದು
ಹೊಡೆದಾಡುವುದೆ ರಂಪ

ಬಲದಿಂದ ಎಡಕ್ಕೂ
ಎಡದಿಂದ ಬಲಕ್ಕೂ
ಓದಿದರೂ ಸರಸ ಸರಸ
ಭಕ್ತಿಯ ಮೂಲಕ ಕೃಷ್ಣನ
ತನ್ನೆಡೆಗೆ ತಿರುಗಿಸಿಕೊಂಡ
ಕನಕನ ಕಿಂಡಿಯ ಅರಸ
ನಮ್ಮ ಹೆಮ್ಮೆಯ ಕನಕ

■ **ಮಲ್ಲಿಕಾರ್ಜುನ ಸುರಧೇನುಪುರ**